ಶ್ರೀ ಕೆ. ಜೆ. ಬೋಪಯ್ಯ : ಆಯಿತು.

245 (1657) ಶ್ರೀ ಶಿವರಾಮು ಬಿ. (ಗಂಡಸಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಸ್ಕಾಂನ ವ್ಯಾಪ್ತಿಯಲ್ಲಿ ಅನಧಿಕೃತ ಪಂಪ್‌ಸೆಟ್‌ಗಳಿಗೆ ಆರ್.ಆರ್. ನಂಬರ್ (ಸಕ್ರಮೀಕರಣ) ಕೊಟ್ಟಿರುವುದು ನಿಜವಲ್ಲವೆ;

ಆ) ಯಾವ ದಿನಾಂಕದವರೆಗೆ ಆರ್.ಆರ್. ನಂಬರ್ ಹಣ ಪಡೆಯದೆ ಕೊಟ್ಟಿರುತ್ತದೆ ಮತ್ತು ಸಕ್ರಮೀಕರಣವನ್ನು ಹಣ ಪಡೆಯದೇ (ಸಕ್ರಮೀಕರಣದ ಅಂದರೆ ಆರ್.ಆರ್.ನಂಬರ್ ಕೊಡುವಾಗ) ಮಾಡಿರುವ ಸಂಖ್ಯೆ ಎಷ್ಟು;

ಇ) ಚೆಸ್ಕಾಂಗೂ ಕೂಡ ಇದೇ ವ್ಯವಸ್ಥೆಯನ್ನು ಜಾರಿಗೆ ತರದಿರಲು ಕಾರಣವೇನು ಮತ್ತು ಸಕ್ರಮೀಕರಣಗೊಳಿಸುವ ಅಂದರೆ ಬೆಸ್ಕಾಂನಂತೆ ವ್ಯವಸ್ಥೆ ಮಾಡಲಾಗುತ್ತದೆಯೇ;

ಈ) ಚೆಸ್ಕಾಂ ವ್ಯಾಪ್ತಿಯಲ್ಲಿ ಅನಧಿಕೃತ ಪಂಪ್‌ಸೆಟ್ ಬಾವಿಗಳ ಸಂಖ್ಯೆ ಎಷ್ಟು;

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿ ಅನಧಿಕೃತ ಪಂಪ್‌ಸೆಟ್‌ಗಳಿಗೆ ಆರ್.ಆರ್. ನಂಬರ್ ಕೊಟ್ಟಿರುವುದಿಲ್ಲ. ಸಕ್ರಮೀಕರಣಗೊಳಿಸಲಾದ ಅನಧಿಕೃತ ನೀರಾವರಿ ಪಂಪ್‌ಸೆಟ್ಟುಗಳಿಗೆ ಮಾತ್ರ ಆರ್.ಆರ್.ನಂಬರ್‌ಗಳನ್ನು ನೀಡಲಾಗಿದೆ.

ಆ) ದಿನಾಂಕ: 13–2–2007 ರಿಂದ 31–3–2007ರ ಅವಧಿಯಲ್ಲಿ ಸರ್ಕಾರದ ದಿನಾಂಕ: 3–10–2006ರ ಆದೇಶ ಸಂಖ್ಯೆ ಇಎನ್ 170 ಪಿಎಸ್‌ಆರ್ 2006ರ ಪ್ರಕಾರ ಅನಧಿಕೃತ ನೀರಾವರಿ ಪಂಪುಸೆಟ್ಟು ಬಳಕೆದಾರರಿಂದ ಸಕ್ರಮೀಕರಣ ಶುಲ್ಕವನ್ನು ಬರತಕ್ಕ ಬಾಕಿಯೆಂದು ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ನಮೂದಿಸಿ ಸಕ್ರಮಗೊಳಿಸಿ ತಾತ್ಕಾಲಿಕ ಆರ್.ಆರ್. ನಂಬರ್‌ಗಳನ್ನು ನೀಡಲಾಗಿದೆ. ಈ ರೀತಿಯಾಗಿ ಸಕ್ರಮಗೊಳಿಸಲಾದ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ ಒಟ್ಟು **92,459**. ಅಲ್ಲದೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಆದೇಶದಂತೆ, ಅನಧಿಕೃತ

ಪಂಪುಸೆಟ್ಟುಗಳ ವಿದ್ಯುತ್ ಬಳಕೆಯನ್ನು ಲೆಕ್ಕಿಸಲು, ಮೇಲಿನಂತೆ ಕ್ರಮ ತೆಗೆದುಕೊಳ್ಳಲಾಗಿದೆ. ಇಲ್ಲದಿದ್ದಲ್ಲಿ ಅನಧಿಕೃತ ಪಂಪುಸೆಟ್ಟುಗಳ ವಿದ್ಯುತ್ ಬಳಕೆಯನ್ನು ಪರಿಗಣಿಸುವು ದಿಲ್ಲವೆಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿದ್ಯುತ್ ಸರಬರಾಜು ಕಂಪನಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿತ್ತು.

ಇ) ಸರ್ಕಾರದ ದಿನಾಂಕ: 3–10–2006ರ ಆದೇಶ ಸಂಖ್ಯೆ ಇಎನ್ 170 ಪಿಎಸ್ಆರ್ 2006ರ ಪ್ರಕಾರ ಅನಧಿಕೃತ ನೀರಾವರಿ ಪಂಪುಸೆಟ್ಟು ಗಳನ್ನು ಸಕ್ರಮೀಕರಣಗೊಳಿಸಲು ಬೆಸ್ಕಾಂ ಕ್ರಮ ಜರುಗಿಸಿದೆ.

ಈ) ಚೆಸ್ಕಾಂ ವ್ಯಾಪ್ತಿಯಲ್ಲಿ ಕೆಲವು ಅನಧಿಕೃತ ನೀರಾವರಿ ಪಂಪುಸೆಟ್ಟುಗಳು ಮಾತ್ರ ಇದ್ದು. ಸಕ್ರಮಕ್ಕಾಗಿ ಅರ್ಜಿಬಾರದೇ ಇದ್ದಲ್ಲಿ ಅವುಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ.ಶಿವರಾಮು : ಚೆಸ್ಕಾಂ ವ್ಯಾಪ್ತಿಯಲ್ಲಿ ಅನಧಿಕೃತ ಪಂಪ್‌ಸೆಟ್ ಬಾವಿಗಳ ಸಂಖ್ಯೆ ಎಷ್ಟು ಎಂದು ನಿಖರವಾಗಿ ಕೇಳಿದ್ದೇನೆ. ಚೆಸ್ಕಾಂ ವ್ಯಾಪ್ತಿಯಲ್ಲಿ ಕೆಲವು ಅನಧಿಕೃತ ನೀರಾವರಿ ಪಂಪುಸೆಟ್ಟುಗಳು ಮಾತ್ರ ಬಾಕಿ ಇದ್ದು, ಸಕ್ರಮಕ್ಕಾಗಿ ಅರ್ಜಿ ಬಾರದೇ ಇದ್ದಲ್ಲಿ ಅವುಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಇರುವುದು ಅನಧಿಕೃತ ಪಂಪ್‌ಸೆಟ್ ಬಾವಿಗಳ ಸಂಖ್ಯೆ ಎಷ್ಟು ಎನ್ನತಕ್ಕಂಥಾದ್ದು. ಹಿಂದೆ ನಾನು ಒಂದು ಪ್ರಶ್ನೆ ಕೇಳಿದಾಗ, 45,276 ಎನ್ನುವ ಒಂದು ಉತ್ತರ ಬಂದಿತ್ತು. ಆದರೆ ಈ ಸಾರಿ ಕೆಲವು ಎಂದು ಉತ್ತರ ಬಂದಿದೆ. ಹಾಗಿದ್ದರೆ ಎಷ್ಟು ಸಕ್ರಮವಾಗಿರಬಹುದು ಎನ್ನುವುದು ಒಂದು ಪ್ರಶ್ನೆ. ಮತ್ತೊಂದು ಪ್ರಶ್ನೆಯೆಂದರೆ, ಯಾವ ದಿನಾಂಕದವರೆಗೆ ಆರ್.ಆರ್.ನಂಬರ್ ಹಣ ಪಡೆಯದೇ ಕೊಟ್ಟಿರುತ್ತದೆ ಮತ್ತು ಸಕ್ರಮೀಕರಣ ವನ್ನು ಹಣ ಪಡೆಯದೇ (ಸಕ್ರಮೀಕರಣದ ಅಂದರೆ ಆರ್.ಆರ್.ನಂಬರ್ ಕೊಡುವಾಗ) ಮಾಡಿರುವ ಸಂಖ್ಯೆ ಎಷ್ಟು ಎಂದು ಕೇಳಿದ್ದೇನೆ. ಅದಕ್ಕೆ ಬಹಳ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. 92,459 ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮೀಕರಣಗೊಳಿಸಿದ್ದೇವೆ, ಆದರೆ ಸಕ್ರಮೀಕರಣಕ್ಕೆ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡದೇ ಇದ್ದಂಥ ಸಂದರ್ಭದಲ್ಲಿ ಅದನ್ನು ಬರತಕ್ಕ ಬಾಕಿಯೆಂದು ಪರಿಗಣಿಸಿ, ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ನಮೂದಿಸಿ, ತಾತ್ಕಾಲಿಕ ಆರ್.ಆರ್.ನಂಬರನ್ನು ನೀಡಿದ್ದು, ಇದನ್ನು ಬೆಸ್ಕಾಂ

ವಿಭಾಗದಲ್ಲಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಬೆಸ್ಕಾಂ ವಿಭಾಗದಲ್ಲಿ ಮಾಡಿರುವಾಗ ಅದನ್ನು ಚೆಸ್ಕಾಂಗೆ ಏಕೆ ಅನುಷ್ಠಾನಗೊಳಿಸಿಲ್ಲ. ಚೆಸ್ಕಾಂ ವ್ಯಾಪ್ತಿಯಲ್ಲಿ ಎಷ್ಟು ಅನಧಿಕೃತ ಬಾವಿಗಳು ಹಾಗೆಯೇ ಇವೆ ಎನ್ನುವುದು ನನ್ನ ಮೂಲಭೂತವಾದಂಥ ಪ್ರಶ್ನೆ.

ಶ್ರೀ ಹೆಚ್.ಡಿ.ರೇವಣ್ಣ : ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ 2006–07ನೇ ಸಾಲಿನಲ್ಲಿ ಒಟ್ಟು 9,999 ಅನಧಿಕೃತ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲಾಗಿದೆ. ಇದಲ್ಲದೇ , ಸುಮಾರು 27,204 ನೀರಾವರಿ ಪಂಪುಸೆಟ್ಟುಗಳು ಸಕ್ರಮಗೊಂಡಿರುತ್ತವೆ. 15–3–2005 ರಿಂದ 31–3–2006 ರವರೆಗೆ ಚಾಮುಂಡೇಶ್ವರಿಯಲ್ಲಿ ಸುಮಾರು 27 ಸಾವಿರ ಆಗಿದೆ. 2006–07ರಲ್ಲಿ 9,999 ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ 27,204 ಮಾಡಿದ್ದೇವೆ.

ಶ್ರೀ ಬಿ.ಶಿವರಾಮು : ಬಾಕಿ ಎಷ್ಟು ಇವೆ, ಎಷ್ಟು ಮಾಡಿದ್ದೀರಿ ಎನ್ನುವ ನನ್ನ ಪ್ರಶ್ನೆಗೆ ಉತ್ತರ ಬಂತು. ಬೆಸ್ಕಾಂನಲ್ಲಿ ಮಾಡಿರತಕ್ಕಂಥ ನೀತಿಯನ್ನು ತಾವು ಬೆಸ್ಕಾಂಗೆ ಏಕೆ ಅಳವಡಿಸಿಲ್ಲ? ಅಂದರೆ, ಅನಧಿಕೃತವಾಗಿ ಯಾರು ಪಂಪುಸೆಟ್ಟುಗಳನ್ನು ಇಟ್ಟುಕೊಂಡಿರತಕ್ಕಂಥವರು, ಯಾರು ಸಕ್ರಮೀಕರಣಕ್ಕೆ ಹಣವನ್ನು ತುಂಬದೇ ಇದ್ದಾರೆ, ಅವರಿಗೆ ಬೆಸ್ಕಾಂನಲ್ಲಿ ಮಾಡಿರುವಂತೆ, ಬರತಕ್ಕ ಬಾಕಿಯೆಂದು ಹಾಕಿಕೊಂಡು ಅನಧಿಕೃತವಾಗಿ ಆರ್.ಆರ್.ನಂಬರನ್ನು ಕೊಡತಕ್ಕಂಥಾದ್ದನ್ನು ಮಾಡಿದ್ದೀರಲ್ಲ, ಆ ನೀತಿಯನ್ನು ಬೆಸ್ಕಾಂಗೆ ಏಕೆ ಅನುಷ್ಠಾನಗೊಳಿಸಿಲ್ಲ ಎನ್ನತಕ್ಕಂಥಾದ್ದು ನನ್ನ ಪ್ರಶ್ನೆ.

ಶ್ರೀ ಹೆಚ್.ಡಿ.ರೇಣ್ಣ : ಮಾನ್ಯ ಅಧ್ಯಕ್ಷರೆ, ಇವತ್ತು Bangaloreನ BESCOM company ಮಾಡಿದ್ದಾರೆ. ಅದೇ ರೀತಿ Chamundeshwari company ಮಾಡುವುದಕ್ಕೆ ಸಂಬಂಧಪಟ್ಟವರಿಗೆ ಆದೇಶ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ಬಿ.ಶಿವರಾಮು : ಮಾನ್ಯ ಅಧ್ಯಕ್ಷರೆ, ಈ ಉತ್ತರದಿಂದ ಈಗ ತಮಗೆ ಸಮಾಧಾನ ಆಯಿತೋ ಇಲ್ಲವೋ ಗೊತ್ತಿಲ್ಲ. BESCOMನಲ್ಲಿ ಮಾಡಿದ್ದಾರೆ. ಗುಲ್ಬರ್ಗಾ divisionನಲ್ಲಿ ಮಾಡಿದ್ದಾರೆ. CHESCOMನಲ್ಲಿ ಏಕೆ ಮಾಡಿಲ್ಲವೆಂದು ಕೇಳಿದರೆ ಅದಕ್ಕೆ ಅವರು ಪ್ರಯತ್ನ ಮಾಡುತ್ತೇವೆಂದು ಹೇಳಿದರೆ ಅರ್ಥವೇನು? ಕರ್ನಾಟಕ ರಾಜ್ಯದಲ್ಲಿರುವ ಈ ನಿಗಮಗಳು ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ನೀತಿಯನ್ನು ರೈತರ ಮೇಲೆ

ಅನುಸರಿಸುವುದಾದರೆ ರೈತರು ಯಾವ ಮಾರ್ಗವನ್ನು ಅನುಸರಿಸುತ್ತಾರೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ನನ್ನ ಗಂಡಸಿ ಕ್ಷೇತ್ರ ತುಮಕೂರಿನ border ನಲ್ಲಿದೆ. ತುಮಕೂರಿನಲ್ಲಿ ತಿಪಟೂರಿನವರೆ ಅನಧಿಕೃತ ವಾಗಿರತಕ್ಕಂಥ ಬಾವಿಗಳಿಗೆ RR Number ಅನ್ನು ಕೊಡುತಕ್ಕಂಥದ್ದು ಆಗುತ್ತದೆ. ಪಕ್ಕದಲ್ಲಿ ಹಳ್ಳಿಯಲ್ಲಿ ಶುಲ್ಕ ತುಂಬದಿದ್ದವರಿಗೆ RR Number ಕೊಡುವುದಿಲ್ಲ. ಈ ರೀತಿಯ ತಾರತಮ್ಯವನ್ನು ನೋಡಿದಾಗ ರೈತರಲ್ಲಿ ಯಾವ ಭಾವನೆ ಬರುತ್ತದೆ? ಇದನ್ನು ನಿವಾರಿಸುವ ಕೆಲಸವನ್ನು ಎಷ್ಟು ದಿವಸದೊಳಗೆ BESCOM ನೀತಿಯನ್ನು CHESCOM ಗೂ ಅನುಸರಿಸ ಲಾಗುತ್ತದೆ ಎನ್ನುವುದನ್ನು ನಿಖರವಾಗಿ ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ 5 ಕಂಪನಿಗಳಿವೆ, 5 ಕಂಪನಿಗಳೂ ಸಹ independent ಆಗಿ ಕೆಲಸ ಮಾಡುತ್ತವೆ. ಆ ರೀತಿ ಮಾಡುವಂಥ ಸಂದರ್ಭದಲ್ಲಿ ಆ ಕಂಪನಿಯ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮತ್ತೆ ಕಂಪನಿಯಲ್ಲಿ ಯಾವ ರೀತಿ ಕೆಲವು ನೀತಿನಿಯಮ ಇಟ್ಟುಕೊಂಡಿರುತ್ತಾರೋ ಅದರಂತೆ ಮಾಡುತ್ತಾರೆ. ಇದನ್ನು ನಾವು ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆಂದು ಹೇಳಿದ್ದೇನೆ. ಇನ್ನೇನು ಹೇಳಬೇಕು. ಈಗಲೇ ವಿಷಯ ಒಂದೇ ಸಾರಿ ಹೇಳುವುದಕ್ಕೆ ಆಗುತ್ತದೆಯೇ?

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ರೇವಣ್ಣನವರು ಇಡೀ ರಾಜ್ಯದಲ್ಲಿ ಒಂದು ನೀತಿ ನಿರೂಪಣೆ ಮಾಡಿದ ಮೇಲೆ ಎಲ್ಲಾ ರೈತರಿಗೂ ಒಂದೇ ವಿಧವಾದಂಥ ಸೌಲಭ್ಯ ಸಿಗಬೇಕು. ಒಂದು ಕಟಡ ನಂತರ ಹಣಕಾಸಿನ ಮುಗ್ಗಟ್ಟು ಇದೆಯೆಂದು ನಿಲ್ಲಿಸಿದರೆ ರೈತರ ಗತಿ ಏನು? ಆ ರೈತರು ಏನು ಪಾಪ ಮಾಡಿದ್ದಾರೆ? ರೈತ ಏನಾದರೂ ಪಾಪ ಮಾಡಿದ್ದಾನೆಯೇ? ಹಾಗಾದರೆ ನೀವು ಎಲ್ಲರಿಗೂ, ಇಡೀ ರಾಜ್ಯಕ್ಕೆ ಒಂದೇ ತರಹದ ನೀತಿಯನ್ನು ತನ್ನಿ. ಅದು ಬಿಟ್ಟು ಒಂದು ಕಡೆಗೆ ಕೊಡುವುದು, ಅದರ ಪಕ್ಕದಲ್ಲಿ ಕೊಡದೇ ಬಿಡುವುದು ಆ ರೀತಿ ಬೇಡ ಎಂದು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, BESCOM ಯಾವ ರೀತಿ ಇದೆ, CHESCOM ಯಾವ ರೀತಿ ಇದೆ ಎನ್ನುವುದನ್ನು ದಯಮಾಡಿ ನೋಡಿ. ಏಕೆಂದರೆ, BESCOMನಲ್ಲಿ revenue collection 90%

ಇರುವುದರಿಂದ ಅದರಲ್ಲಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿದೆ. Chamunde shwari company ಹೊಸದಾಗಿ ಪ್ರಾರಂಭವಾಗಿರುವುದು, ಹಣಕಾಸಿನ ಪರಿಸ್ಥಿತಿಯನ್ನು ನೋಡಬೇಕಲ್ಲವೇ? ವಿಷಯ ತಿಳಿದುಕೊಳ್ಳದೇ ನಾವು assembly ಯಲ್ಲಿ ಉತ್ತರ ಕೊಡುವುದಕ್ಕೆ ಆಗುತ್ತದೆಯೇ?

ಶ್ರೀ ಬಿ.ಶಿವರಾಮು : ಆದರೆ, ನಗರ ಪ್ರದೇಶಕ್ಕೂ ವ್ಯತ್ಯಾಸವಿದೆ. ಇದು ಮೂಲಭೂತವಾಗಿ ಬರತಕ್ಕಂಥದ್ದು. ಇದು ಹಳ್ಳಿಯ ರೈತರ ಸಮಸ್ಯೆಯಾಗಿದೆ. ಈ ಭಾಗದಲ್ಲಿ RR Number ಸಿಗುತ್ತದೆ, ಆ ಭಾಗದಲ್ಲಿ ಅನಧಿಕೃತ ಬಾವಿಗೆ RR Number ಸಿಗುವುದಿಲ್ಲ ಎಂದರೆ ರೈತ ಯಾವ ರೀತಿ ಯೋಚನೆ ಮಾಡುತ್ತಾರೆ? ಅದನ್ನು ಗಮನದಲ್ಲಿಟ್ಟುಕೊಂಡು ಇದನ್ನು ಮಾಡಬೇಕಾಗಿ ರತಕ್ಕಂಥ ಜವಾಬ್ದಾರಿ ಸರ್ಕಾರದ್ದೇ ಹೊರತು ಅಲ್ಲಿ ಜಾಸ್ತಿ ಇದೆ, ಇಲ್ಲಿ ಕಡಿಮೆ ಇದೆ ಎಂದು ಹೇಳುವುದಾದರೆ, ಅಲ್ಲಿರುವ ರೈತ ಏನು ಪಾಪ ಮಾಡಿದ್ದ ಎನ್ನುವ ಪ್ರಶ್ನೆ ಇಲ್ಲಿ ಬರುತ್ತದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ.ಬಸವರಾಜು : ಸರ್, ಆ ಕಂಪನಿಯದು ಏನು ಇದೆ ಎನ್ನುವುದನ್ನು ವಿಚಾರ ಮಾಡಿ ಹೇಳುತ್ತೇನೆಂದು ಹೇಳಿದ್ದೇನಲ್ಲ.

ಶ್ರೀ ಬಿ.ಶಿವರಾಮು : ಸದನಕ್ಕೆ ಉತ್ತರ ಹೇಳುವುದಕ್ಕೆ ಬರುವವರು ಕಂಪನಿಯಲ್ಲಿ ವಿಚಾರಣೆ ಮಾಡಿ ಬರದೆಯೇ, ಸದನಕ್ಕೆ ಬಂದು ಆಮೇಲೆ ವಿಚಾರಣೆ ಮಾಡುತ್ತೇನೆಂದು ಹೇಳಿದರೆ ಮಾನ್ಯ ಅಧ್ಯಕ್ಷರೆ, ಇದು ನಿಮಗೆ ಸಮಾಧಾನ ತರತಕ್ಕಂಥದ್ದು ಎಂದರೆ ನನ್ನದು ಅಭ್ಯಂತರವಿಲ್ಲ.

ಅಧ್ಯಕ್ಷರು : ಈಗ ಏನಾಗಿದೆ ಎಂದರೆ ಅವರು ಈ ಕಂಪನಿಗಳ ಪರಿಸ್ಥಿತಿ ಎಲ್ಲವನ್ನು ಅಭ್ಯಾಸ ಮಾಡಿ ಹೇಳುತ್ತಿದ್ದೇನೆಂದು ಹೇಳುತ್ತಿದ್ದಾರೇನೋ.

ಶ್ರೀ ಬಿ.ಶಿವರಾಮು : ಅಂದರೆ ಸಚಿವರು ಇನ್ನೂ ಕೂಡ ಕಂಪನಿ ಬಗ್ಗೆ ಅಭ್ಯಾಸ ಮಾಡುತ್ತಿದ್ದಾರೆ! ಇಷ್ಟು ದಿವಸವಾದರೂ ಕೂಡ ಬಜೆಟ್, ಎಲ್ಲಾ ಆಗಿದ್ದರೂ ಕೂಡ, ಯಾವ ಜಿಲ್ಲೆಯಾದರೂ ಏನು, ಎಲ್ಲರೂ ರೈತರೇ ತಾನೆ. ಈಗ ಇಂಥ ವಿಚಾರವನ್ನು serious ಆಗಿ ಪರಿಗಣಿಸುವುದಿಲ್ಲವೆಂದರೆ, ನಾನು ಇನ್ನು ನೋಡುತ್ತೇನೆ, ಮಾಡುತ್ತೇನೆ, Study ಮಾಡುತ್ತೇನೆ ಎನ್ನುವ ಉತ್ತರ ಕೊಡುವುದಾದರೆ, ಇದು ಸದನಕ್ಕೆ ಕೊಡುವ ಉತ್ತರವೇ?

ಅಧ್ಯಕರು : ಆಯಿತು, ಆಯಿತು.

ಶ್ರೀ ಬಿ.ಶಿವರಾಮು : ಆಯಿತು ಎನ್ನುವುದಾದರೆ ಒಪ್ಪಿಕೊಂಡು ಬಿಡುತ್ತೇನೆ.

246 (1632) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು ಎಂದಿನಿಂದ ಪ್ರಾರಂಭಿಸಲಾಗಿದೆ;

ಆ) ಈಗ ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ಎಷ್ಟನೇ ಹಂತಕ್ಕೆ ತಲುಪಿಸಲಾಗಿದೆ;

ಇ) ಬೆಂಗಳೂರು ನಗರವು ಬೃಹದಾಕಾರವಾಗಿ ಬೆಳೆಯುತ್ತಿದ್ದು, ಇಡೀ ಬೆಂಗಳೂರು ನಗರಕ್ಕೆ ಕಾವೇರಿ ನೀರಿನ ವ್ಯವಸ್ಥೆಯನ್ನು ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ;

ಈ) ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ಬಿಟ್ಟು ಬೇರೆ ನೀರಿನ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮುಖ್ಯಮಂತ್ರಿ) :

ಅ) ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು ದಿನಾಂಕ: 24–01–1974 ರಿಂದ ಕಾವೇರಿ ನೀರು ಸರಬರಾಜು ಯೋಜನೆ ಮೊದಲನೇ ಹಂತ ಕಾರ್ಯಗತಗೊಳಿಸುವುದರ ಮೂಲಕ ಪ್ರಾರಂಭಿಸಲಾಗಿದೆ.

ಆ) ಈಗ ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು ಯೋಜನೆ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಹಂತದ ಮೊದಲನೇ ಘಟ್ಟಗಳಿಂದ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಇ) ಬೆಂಗಳೂರು ನಗರವು ಬೃಹದಾಕಾರವಾಗಿ ಬೆಳೆಯುತ್ತಿದ್ದು ಬೆಂಗಳೂರು ಮಹಾನಗರ ಪ್ರದೇಶಗಳಿಗೆ ಕಾವೇರಿ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಹಂತದ ಮೊದಲನೇ ಘಟ್ಟಗಳಿಂದ ನೀರು ಪೂರೈಸಲಾಗುತ್ತಿದೆ.

ಬೆಂಗಳೂರು ಜಲಮಂಡಳಿಯು ಈಗಾಗಲೇ ಅನುಷ್ಠಾನಗೊಳಿಸಿರುವ ಕಾವೇರಿ ನೀರು ಸರಬರಾಜು ಯೋಜನೆ ನಾಲ್ಕನೇ ಹಂತ ಮೊದಲನೇ ಘಟ್ಟದಿಂದ ಹೆಚ್ಚುವರಿ 100 ದಶಲಕ್ಷ ಲೀಟರ್ ದಿನಂ ಪ್ರತಿ ಕುಡಿಯುವ